# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 23.06.2020 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತ ಸದಸ್ಯರು:**

**ಅನುಪಸ್ಥಿತ ಸದಸ್ಯರು:**

## <u>ಪ್ರಾರಂಭಿಕ</u>

ಪ್ರಾರಂಭದಲ್ಲಿ ಮಾನ್ಯ ಕುಲಸಚಿವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 28(1)(ಎಫ್)ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡ ಡಾ. ಮಧುಸೂಧನ್ ಭಟ್, ಪ್ರಾಂಶುಪಾಲರು, ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು, ಕುಂಜಿಬೆಟ್ಟು, ಉಡುಪಿ ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 28(1)(ಎಫ್)ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಪ್ರೊ. ಅಖಿಲೇಶ್ ಪಿ.ಎಂ., ಪ್ರಾಂಶುಪಾಲರು, ಫಾದರ್ ಮುಲ್ಲರ್ ಕಾಲೇಜು, ಮಂಗಳೂರು ಇವರ ಸದಸ್ಯತ್ವದ ಅವಧಿಯು ಕೊನೆಗೊಂಡಿರುವ ಬಗ್ಗೆ ಸಭೆಗೆ ಮಾಹಿತಿ ನೀಡಿ, ಇವರು ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಮಾನ್ಯ ಕುಲಪತಿಯವರು ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

**I ನಡವಳಿಗಳ ದೃಢೀಕರಣ:**

1. ದಿನಾಂಕ 21.05.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಗಳಲ್ಲಿ ಕಾರ್ಯಸೂಚಿ ಸಂಖ್ಯೆ:ಪರೀಕ್ಷಾಂಗ:ವಿ.ಸ.2:4(2020) ಅಕ್ಟೋಬರ್/ನವೆಂಬರ್ 2019ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು– ದಂಡನೆಯನ್ನು ದೃಢಪಡಿಸುವ ಬಗ್ಗೆ ತೆಗೆದುಕೊಂಡ ನಿರ್ಣಯದ ಬಗ್ಗೆ ಈ ಕೆಳಗಿನಂತೆ ಹೆಚ್ಚುವರಿ ಸೇರ್ಪಡೆಗೊಳಿಸಿ, ದೃಢೀಕರಿಸಲಾಯಿತು.

ಪರೀಕ್ಷಾ ಅವ್ಯವಹಾರಗಳಲ್ಲಿ ತೊಡಗಿದ್ದ ವಿದ್ಯಾರ್ಥಿಗಳಿಗೆ ನೀಡಿದ ದಂಡನೆಯನ್ನು

ದೃಢೀಕರಿಸಲಾಯಿತು. ಮುಂದುವರಿದು ಶಿಕ್ಷಣ ಸಂಸ್ಥೆ ಅಥವಾ ಶಿಕ್ಷಕರು ಅವ್ಯವಹಾರದಲ್ಲಿ ತೊಡಗಿದ್ದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದು. ವಿಶ್ವವಿದ್ಯಾನಿಲಯದ ಅನುಶಾಸನ/ ವಿನಿಯಮದಲ್ಲಿ ಅವಕಾಶ ಇಲ್ಲದೇ ಇದ್ದಲ್ಲಿ ತಿದ್ದುಪಡಿಗೊಳಿಸಲು ಕ್ರಮ ತೆಗೆದುಕೊಳ್ಳುವುದು. ಪರೀಕ್ಷಾ ಅವ್ಯವಹಾರಗಳನ್ನು ತಡೆಗಟ್ಟುವ/ನಿಯಂತ್ರಿಸುವ ಉದ್ದೇಶದಿಂದ ಚೆಕ್ಕಿಂಗ್ ವ್ಯವಸ್ಥೆಯನ್ನು ಬಲಪಡಿಸಲು ಹಾಗೂ ಹೆಚ್ಚುವರಿ ಜಾಗೃತ ದಳಗಳನ್ನು ಬಳಸಿಕೊಳ್ಳಲು ತೀರ್ಮಾನಿಸಲಾಯಿತು.

**ಹಾಗೆಯೇ ಪರೀಕ್ಷೆಗಳನ್ನು ನಡೆಸುವ ಹಾಗೂ ತೆಗೆದುಕೊಳ್ಳುವ ಪ್ರಕ್ರಿಯೆಯ ಪಾವಿತ್ರ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯ ತೆಗೆದುಕೊಳ್ಳಬೇಕಾಗಿರುವ ಹೆಚ್ಚುವರಿ ಮುಂಜಾಗ್ರತಾ ಕ್ರಮಗಳ ಬಗ್ಗೆ ನಿರ್ಣಯಕ್ಕೆ ಬರಲು ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಈ ಹಿಂದಿನ ಐದು ವರ್ಷಗಳಲ್ಲಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ನಡೆದಿರುವ ಅವ್ಯವಹಾರಗಳ ಬಗ್ಗೆ ಈಗಾಗಲೇ ದಾಖಲಾಗಿರುವ ಮಾಹಿತಿಗಳ ಆಧಾರದಲ್ಲಿ ಕಾಲೇಜುವಾರು–ವಿಷಯವಾರು, ಮೂರು ಜಿಲ್ಲೆಗಳಿಗೆ ಅನ್ವಯವಾಗುವಂತೆ ವರದಿ ತಯಾರಿಸಿ, ವಿಷಯವನ್ನು ಮುಂದಿನ ಸಿಂಡಿಕೇಟು ಸಭೆಯಲ್ಲಿ ಮಂಡಿಸಿ, ಹೆಚ್ಚು ಸಂಖ್ಯೆ ಹಾಗೂ ಗಂಭೀರತೆಯಿಂದ ಕೂಡಿರುವ ಪರೀಕ್ಷಾ ಅವ್ಯವಹಾರಗಳು ನಡೆದಿರುವ ಕಾಲೇಜು ಪ್ರಾಂಶುಪಾಲರಿಗೆ ತಿಳುವಳಿಕೆ ನೀಡಿ ಮುಂದಕ್ಕೆ ಸಿ.ಸಿ.ಟಿ.ವಿ ಅಥವಾ ಇತರ ವ್ಯವಸ್ಥೆಗಳ ಮೂಲಕ ಅವ್ಯವಹಾರಗಳನ್ನು ತಡೆಗಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.**

2. ದಿನಾಂಕ 21.05.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಗಳಲ್ಲಿ ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ವಿ.ಸ.2:7(2020) ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರಭಾರ ಅಧ್ಯಕ್ಷರ ನೇಮಕಾತಿ ಬಗ್ಗೆ ತೆಗೆದುಕೊಂಡ ನಿರ್ಣಯದ ಬಗ್ಗೆ ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

**ಪ್ರೊ. ಜಯರಾಜ್ ಅಮೀನ್, ಪ್ರಾಧ್ಯಾಪಕರು, ಇವರನ್ನು ದಿನಾಂಕ 16.03.2020 ರಿಂದ ಅನ್ವಯವಾಗುವಂತೆ ಪ್ರಭಾರ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಅನುಮೋದನೆ ನೀಡಲಾಯಿತು.**

3. ದಿನಾಂಕ 21.05.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಗಳಲ್ಲಿ ಇತರ ವಿಷಯದಲ್ಲಿ ಹೆಚ್ಚುವರಿಯಾಗಿ ಈ ಕೆಳಗಿನಂತೆ 8ನೇ ನಿರ್ಣಯವನ್ನು ಸೇರಿಸಿ ದೃಢೀಕರಿಸಲಾಯಿತು.

**ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜಿನ ಭೌತಶಾಸ್ತ್ರ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು ತಮ್ಮ ವಿದ್ಯಾರ್ಥಿಗಳಿಗೆ ತಮ್ಮದೇ ವಸತಿ ನಿಲಯಯದಲ್ಲಿ ವಾಸ್ತವ್ಯವನ್ನು ನೀಡಿ ಆಂತರಿಕ ಮೌಲ್ಯಮಾಪನದಲ್ಲಿ ಹೆಚ್ಚು ಅಂಕ ನೀಡುವ ಸಾಧ್ಯತೆಯಿರುವುದರಿಂದ, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರನ್ನು ಬದಲಾವಣೆ ಮಾಡುವುದು**

**ಸೂಕ್ತವೆಂಬ ಅಭಿಪ್ರಾಯವನ್ನು ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಪಾರ್ವತಿ ಅಪ್ಪಯ್ಯನವರು ವ್ಯಕ್ತಪಡಿಸಿದರು.**

4. ದಿನಾಂಕ 24.02.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಗಳಲ್ಲಿ ಇತರೆ ವಿಷಯಕ್ಕೆ ಸಂಬಂಧಿಸಿ ದಿನಾಂಕ 21.05.2020 ರಂದು ನಡೆದ ದ್ವಿತೀಯ ವಿಶೇಷ ಸಭೆಯಲ್ಲಿ ಮಾಡಿದ ತಿದ್ದುಪಡಿ ನಿರ್ಣಯಕ್ಕೆ(2 ರಲ್ಲಿ iii )ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ. ರಮೇಶ್.ಕೆ, ಇವರು ವಿಶ್ವವಿದ್ಯಾನಿಲಯಕ್ಕೆ ಘಟಕ ಕಾಲೇಜಿನಿಂದ ಹುದ್ದೆ ಸಮೇತ ವರ್ಗಾವಣೆಯಾಗಿ ಬಂದಿರುವ ಪ್ರಾಧ್ಯಾಪಕರ ಮಾಹಿತಿಯ ಕುರಿತಂತೆ ಪ್ರಸ್ತಾಪಿಸಿದರು. ಮಾನ್ಯ ಕುಲಪತಿಯವರು ಇದಕ್ಕೆ ಸಂಬಂಧಿಸಿದಂತೆ ಪರಿಶೀಲಿಸಿ ವರದಿ ಸಲ್ಲಿಸಲು ತನಿಖಾ ಸಮಿತಿಯನ್ನು ರಚಿಸುವುದಾಗಿ ಸಭೆಗೆ ತಿಳಿಸಿದರು. ಮುಂದುವರಿದು ಡಾ. ನಾಗಪ್ಪ ಗೌಡ, ವಿಶೇಷಾಧಿಕಾರಿ, ಕುಲಸಚಿವರ ಕಚೇರಿ ಇವರನ್ನು ತಕ್ಷಣದಿಂದ ಅನ್ವಯವಾಗುವಂತೆ ವಿಶೇಷಾಧಿಕಾರಿ ಹುದ್ದೆಯಿಂದ **ಬಿಡುಗಡೆಗೊಳಿಸಿ ಮಂಗಳೂರು ವಿಶ್ವವಿದ್ಯಾನಿಲಯದ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಗೆ ಮರುನಿಯೋಜನೆ ಮಾಡಲು ನಿರ್ಣಯಿಸಲಾಯಿತು.**

**II ಅನುಸರಣಾ ವರದಿಯ ಅನುಮೋದನೆ:**

ದಿನಾಂಕ 24.02.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.2:01(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ದಿನಾಂಕ 01.07.2020 ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ನೇಮಕಗೊಂಡ ಅಧ್ಯಕ್ಷರುಗಳ ಹೆಸರು ಈ ಕೆಳಗಿನಂತಿದೆ.

| ಕ್ರ.ಸಂ | ಅಧ್ಯಯನ ವಿಭಾಗ | ನೇಮಕ ಮಾಡಲಾದ ಅಧ್ಯಕ್ಷರ ಹೆಸರು |
|---|---|---|
| **ಕಲಾ ನಿಕಾಯ** | | |
| 1. | ಆಂಗ್ಲ ವಿಭಾಗ | ಪ್ರೊ. ಕಿಶೋರಿ ನಾಯಕ್. ಕೆ |
| 2. | ಅರ್ಥಶಾಸ್ತ್ರ ವಿಭಾಗ | ಪ್ರೊ. ವಿಶ್ವನಾಥ್ |
| 3. | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ | ಶ್ರೀ ಉಮೇಶ್ಚಂದ್ರ ಎಂ.ಪಿ |

4. ರಾಜ್ಯಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರ ನೇಮಕಾತಿ ವಿಷಯದಲ್ಲಿ ಡಾ. ದಯಾನಂದ ನಾಯ್ಕ್ ಇವರು ವಿಶ್ವವಿದ್ಯಾನಿಲಯ ಕಾಲೇಜಿನಿಂದ ಹುದ್ದೆ ಸಮೇತ ವರ್ಗಾವಣೆಗೊಂಡಿರುವುದು ಕಾನೂನಾತ್ಮಕವಾಗಿದೆಯೇ ಎಂಬುದನ್ನು ಸಮಿತಿ ನೀಡಲಿರುವ ವರದಿಯನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವವರೆಗೆ ಪ್ರೊ. ಜಯರಾಜ್ ಅಮೀನ್ ಇವರನ್ನು ರಾಜ್ಯಶಾಸ್ತ್ರ ವಿಭಾಗದ ಅಧ್ಯಕ್ಷರನ್ನಾಗಿ ಮುಂದುವರಿಸುವುದು.

**ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ**

| | | |
|---|---|---|
| 1. | ಜೀವವಿಜ್ಞಾನ ವಿಭಾಗ | ಪ್ರೊ. ಮೋನಿಕಾ ಸದಾನಂದ |
| 2. | ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ | ಪ್ರೊ. ಶ್ರೀಪಾದ ಕೆ.ಎಸ್. |

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.2:02(2020)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಕೊಂಕಣಿ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮತ್ತು ಸ್ನಾತಕೋತ್ತರ ಕೊಂಕಣಿ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.2:03(2020)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಶಾರೀರಿಕ ಶಿಕ್ಷಣ ಮತ್ತು ಕ್ರೀಡಾ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮತ್ತು ಸ್ನಾತಕೋತ್ತರ ಶಾರೀರಿಕ ಶಿಕ್ಷಣ ಮತ್ತು ಕ್ರೀಡಾ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.2:04(2020)

**ವಿಷಯ:** ಬೋಧಕೇತರ ಸಿಬ್ಬಂದಿಗಳಿಗೆ ಮುಂಭಡ್ತಿ ನೀಡಿರುವ ಬಗ್ಗೆ ಹಾಗೂ ಪರಿಷ್ಕೃತ ಪದೋನ್ನತಿ ರೋಸ್ಟರಿನ ಅನುಮೋದನೆ ಬಗ್ಗೆ.

**ನಿರ್ಣಯ:** ಬೋಧಕೇತರ ಸಿಬ್ಬಂದಿಗಳಿಗೆ ಮುಂಭಡ್ತಿ ನೀಡಿರುವ ಹಾಗೂ ಪರಿಷ್ಕೃತ ಪದೋನ್ನತಿ ರೋಸ್ಟರಿನ ಬಗ್ಗೆ ಇತರ ಬೋಧಕೇತರ ಸಿಬ್ಬಂದಿಗಳಿಗೆ ಅನ್ಯಾಯವಾಗಿದ್ದಲ್ಲಿ ಮನವಿ ನೀಡಲು 15 ಜುಲೈ 2020 ರವರೆಗೆ ಅಥವಾ ಒಂದುವರೆ ತಿಂಗಳಿನ ಸಮಯಾವಕಾಶ ಕೊಟ್ಟು, ಮನವಿಯ ಬಗ್ಗೆ ಪರಿಶೀಲಿಸಿ ನಿರ್ಣಯಿಸಲು ಎರಡು ಸಿಂಡಿಕೇಟು ಸದಸ್ಯರನ್ನು, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ಹಾಗೂ ವಿಷಯ ತಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸುವುದು. ಈ ಸಮಿತಿಯ ವರದಿಯ ಮೇರೆಗೆ ಅಂತಿಮ ನಿರ್ಧಾರವನ್ನು ಕೈಗೊಳ್ಳಲು ಸಿಂಡಿಕೇಟು ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.2:05(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳ (ಆಡಳಿತ, ಲಿಪಿಕ ಮತ್ತು ಇನ್ನಿತರ ಬೋಧಕೇತರ ಹುದ್ದೆಗಳ) ವೃಂದ ಮತ್ತು ನೇಮಕಾತಿ ನಿಯಮಗಳ ಕ್ರೋಡಿಕೃತ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲು ಕಾಲಾವಕಾಶ ಬೇಕಾಗಿರುವ ಕಾರಣ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.2:06(2020)

**ವಿಷಯ:** ದತ್ತಿ ಉಪನ್ಯಾಸ ನಿಧಿ ಸ್ಥಾಪನೆಗೆ ಕನಿಷ್ಠ ಮೊತ್ತ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ದತ್ತಿ ಉಪನ್ಯಾಸ ನಿಧಿ ಸ್ಥಾಪನೆಗೆ ಕನಿಷ್ಠ ಮೊತ್ತ ರೂ. 5,00,000/- ಎಂದು ನಿಗದಿಪಡಿಸುವುದು. ಕೆಲವೊಂದು ಸಂದರ್ಭಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವೇ ದತ್ತಿ ಉಪನ್ಯಾಸ ನಿಧಿ ಸ್ಥಾಪನೆ ಮಾಡುವಾಗ ಅದರದ್ದೇ ಆದ ಘನತೆ, ಗೌರವಕ್ಕೆ ತಕ್ಕದಾಗಿದ್ದು ಔಚಿತ್ಯ ಪೂರ್ಣವಾಗಿರಬೇಕು ಹಾಗೂ ಗುಣಮಟ್ಟವನ್ನು ಸೂಚಿಸುವಂತಾಗಿರಬೇಕು ಎಂದು ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಎಂ.ಎಸ್. ತಳವಾರ ಇವರು ಅಭಿಪ್ರಾಯ ಪಟ್ಟರು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.2:07(2020)

**ವಿಷಯ:** ಅರ್ಥಶಾಸ್ತ್ರ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 5 KVA Online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅರ್ಥಶಾಸ್ತ್ರ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 5 KVA Online UPS ಮತ್ತು ಬ್ಯಾಟರಿಗಳ ಖರೀದಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.2:08(2020)

**ವಿಷಯ:** ಗಣಿತಶಾಸ್ತ್ರ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 5 KVA Online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಗಣಿತಶಾಸ್ತ್ರ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 5 KVA Online UPS ಮತ್ತು ಬ್ಯಾಟರಿಗಳ ಖರೀದಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.2:09(2020)

**ವಿಷಯ:** ಗಣಕ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ– ಧಾರಣಾಗುತ್ತಿಗೆ ದರದಲ್ಲಿ 5 KVA Online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಗಣಕ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ– ಧಾರಣಾಗುತ್ತಿಗೆ ದರದಲ್ಲಿ 5 KVA Online UPS ಮತ್ತು ಬ್ಯಾಟರಿಗಳ ಖರೀದಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.2:10(2020)

**ವಿಷಯ:** ಸಮೂಹ ಸಂಪರ್ಕ ಮತ್ತು ಪತ್ರಿಕೋದ್ಯಮ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 7.5 KVA ಮತ್ತು 5 KVA Online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಸಮೂಹ ಸಂಪರ್ಕ ಮತ್ತು ಪತ್ರಿಕೋದ್ಯಮ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾಗುತ್ತಿಗೆ ದರದಲ್ಲಿ 7.5 KVA ಮತ್ತು 5 KVA Online UPS ಮತ್ತು ಬ್ಯಾಟರಿಗಳ ಖರೀದಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.2:11(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ದೇಣಿಗೆ ಮತ್ತು ದತ್ತಿನಿಧಿ ಸ್ವೀಕಾರ ಮತ್ತು ನಿರ್ವಹಣೆಗೆ ಸಂಬಂಧಿಸಿದ ಪರಿನಿಯಮ ತಿದ್ದುಪಡಿ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ದೇಣಿಗೆ ಮತ್ತು ದತ್ತಿನಿಧಿ ಸ್ವೀಕಾರ ಮತ್ತು ನಿರ್ವಹಣೆಗೆ ಸಂಬಂಧಿಸಿದ ಪರಿನಿಯಮ ತಿದ್ದುಪಡಿಯನ್ನು ಸಿಂಡಿಕೇಟು ಸಭೆಯು ಅನುಮೋದಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.2:12(2020)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಫುಡ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ (Food Science and Technology) ಸಂಯುಕ್ತ ಅಧ್ಯಯನ ಮಂಡಳಿ ಪುನರ್ರಚನೆ ಬಗ್ಗೆ.

**ನಿರ್ಣಯ:** ಪದವಿ ಮತ್ತು ಸ್ನಾತಕೋತ್ತರ ಫುಡ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ (Food Science and Technology) ಸಂಯುಕ್ತ ಅಧ್ಯಯನ ಮಂಡಳಿ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಹಣಕಾಸು ಸಾ.ಸ.2:13(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2020–21ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಕಾರ್ಯಸೂಚಿಯಲ್ಲಿ 2019–20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಮತ್ತು 2020–21ನೇ ಸಾಲಿನ ಆಯವ್ಯಯ ಅಂದಾಜುಗಳ ಬಗ್ಗೆ ಸವಿವರವಾದ ಟಿಪ್ಪಣಿ ಆಧಾರಿತ ವರದಿ ಕಂಡು ಬರುವುದಿಲ್ಲ. ಮಂಗಳೂರು ವಿಶ್ವವಿದ್ಯಾನಿಲಯದ Vision, Mission, Objectives ಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ವರ್ಷ ಕೈಗೆತ್ತಿಕೊಳ್ಳಲಿರುವ ಕಾಮಗಾರಿಗಳು, ಇತರ ಯೋಜನೆಗಳು, ಅದಕ್ಕೆ ತಗಲಲಿರುವ ಖರ್ಚು ವೆಚ್ಚಗಳ ಅಂದಾಜು, ಆಯವ್ಯಯದಲ್ಲಿ ಮಂಡಿಸಲಿರುವ ಕೊರತೆಯನ್ನು ಸರಿದೂಗಿಸಲು ಅಗತ್ಯವಿರುವ ತಂತ್ರಗಾರಿಕೆಗಳ ಬಗ್ಗೆ ಮತ್ತು ಆಂತರಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ವಾರ್ಷಿಕ ವರದಿ, ವಾರ್ಷಿಕ ಲೆಕ್ಕಪತ್ರ ಮತ್ತು ಹಿಂದಿನ ಎರಡು ವರ್ಷಗಳ ಲೆಕ್ಕ ಪರಿಶೋಧಕರ ವರದಿಯನ್ನಿಟ್ಟುಕೊಂಡು ಸಮಗ್ರವಾಗಿ ಪರಿಶೀಲಿಸಿ ಅನುಮೋದಿಸಬೇಕಾಗಿರುವ ಕಾರಣ ಸದ್ಯದಲ್ಲೇ ಸಿಂಡಿಕೇಟು ಸಭೆ ಕರೆದು ಮಂಡಿಸಲು ನಿರ್ಣಯಿಸಲಾಯಿತು.

ಮುಂದುವರಿದು, ವಿದ್ಯಾರ್ಥಿಗಳಿಗೆ ಮಾದರಿ ಆಯವ್ಯಯ ತಯಾರಿಸುವ ಯೋಜನೆಗಳನ್ನು (ಪ್ರಾಜೆಕ್ಟ್) ಮಾಡಲು ತಿಳಿಸುವಂತೆ ಸಭೆಯು ಸೂಚಿಸಿತು. ಇದರಿಂದ ವಿದ್ಯಾರ್ಥಿಗಳು ಪ್ರೇರಿತರಾಗುವರು ಹಾಗೂ ವಿಶ್ವವಿದ್ಯಾನಿಲಯವು ರ್‍ಯಾಕಿಂಗ್ ಪಡೆಯಲು ಸಹಾಯಕವಾಗುವುದು ಎಂದು ಸಭೆಯು ಅಭಿಪ್ರಾಯ ಪಟ್ಟಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.2:14(2020)

**ವಿಷಯ:** ಸಂಯೋಜಿತ ಕಾಲೇಜುಗಳಲ್ಲಿ ಸರಕಾರಿ ಕೋಟಾದಡಿ ಪ್ರವೇಶಾತಿಗೊಳ್ಳುವ ವಿದ್ಯಾರ್ಥಿಗಳ ಬೋಧನಾ ಶುಲ್ಕದ ಬಗ್ಗೆ.

**ನಿರ್ಣಯ:** ಸಂಯೋಜಿತ ಕಾಲೇಜುಗಳಲ್ಲಿ ಸರಕಾರಿ ಕೋಟಾದಡಿ ಪ್ರವೇಶಾತಿಗೊಳ್ಳುವ ವಿದ್ಯಾರ್ಥಿಗಳ ಬೋಧನಾ ಶುಲ್ಕವನ್ನು ಸಂಬಂಧಪಟ್ಟ ಕಾಲೇಜುಗಳಲ್ಲಿ ಪಾವತಿಸಿ, ದಾಖಲೆ ಪ್ರತಿಯೊಂದಿಗೆ ಮಾಹಿತಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಯು ಅನುಮೋದಿಸಿತು ಹಾಗೂ ಆನ್‌ಲೈನ್ ಪಾವತಿಗೆ ಉತ್ತೇಜನ ನೀಡುವಂತೆ ಸಭೆಯು ಸೂಚಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ :ಸಾ.ಸ.2:15(2020)

**ವಿಷಯ:** ಡಾ. ಕಿಶೋರಿ ಪಿ. ನಾರಾಯಣ್ಕರ್ ಇವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಲ್ಲಿ ಸಹಾಯಕ ಪ್ರಾಧ್ಯಾಪಕ ಹಂತ 1 ರಿಂದ ಹಂತ 2 ಕ್ಕೆ ನೀಡಿರುವ ಪದೋನ್ನತಿ ದಿನಾಂಕವನ್ನು ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಡಾ. ಕಿಶೋರಿ ಪಿ. ನಾರಾಯಣ್ಕರ್ ಇವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಲ್ಲಿ ಸಹಾಯಕ ಪ್ರಾಧ್ಯಾಪಕ ಹಂತ 1 ರಿಂದ ಹಂತ 2 ಕ್ಕೆ ನೀಡಿದ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ (CAS) ಪದೋನ್ನತಿ ದಿನಾಂಕ 24.11.2014ನ್ನು ಮುಂದೂಡಿ Refresher course ಪೂರ್ಣಗೊಳಿಸಿದ ದಿನಾಂಕ 28.11.2018 ಕ್ಕೆ ನಿಗದಿಪಡಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ :ಸಾ.ಸ.2:16(2020)

**ವಿಷಯ:** ಪಿಹೆಚ್.ಡಿ. ಪದವಿ ಪ್ರದಾನ ಮಾಡಿದ ಬಗ್ಗೆ.

**ನಿರ್ಣಯ:** ಕ್ರಮ ಸಂಖ್ಯೆ (1) ರಿಂದ (32) ರವರೆಗಿನ ವಿದ್ಯಾರ್ಥಿಗಳಿಗೆ ಪಿ.ಹೆಚ್.ಡಿ. ಪದವಿ ಪ್ರದಾನ ಮಾಡಿರುವ ಮಾಹಿತಿಯನ್ನು ಸಿಂಡಿಕೇಟು ಸಭೆಯು ಗಮನಿಸಿ, ಮಾಹಿತಿಯನ್ನು ಅವಗಾಹನೆಗೆ ತರುವುದರ ಜೊತೆಗೆ ಪಿ.ಹೆಚ್.ಡಿ ಮಹಾಪ್ರಬಂಧಗಳು ಹೆಚ್ಚಿನ ಸಂಖ್ಯೆಯ ಓದುಗರಿಗೆ ಮತ್ತು ಸಂಶೋಧನಾ ಆಸಕ್ತರಿಗೆ ಲಭ್ಯವಾಗುವ ನಿಟ್ಟಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿರುವಂತೆ ಮುತುವರ್ಜಿ ವಹಿಸಲು ಸಂಬಂಧಪಟ್ಟವರಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ :ಸಾ.ಸ.2:17(2020)

**ವಿಷಯ:** 2020ನೇ ಸಾಲಿನ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಪರೀಕ್ಷಾ ನಮೂನೆ/ಲಕೋಟೆ/ಲೇಖನ ಸಾಮಾಗ್ರಿಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ–ಟೆಂಡರು ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ಎಲ್1 ಬಿಡ್ಡುದಾರರು ಪತ್ರ ಮುಖಾಂತರ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುವುದರಿಂದ ಎಲ್2 ಬಿಡ್ಡುದಾರರಲ್ಲಿ ಎಲ್1 ಬಿಡ್ಡುದಾರರು ನಿಗದಿಪಡಿಸಿದ ದರದಲ್ಲಿಯೇ ಹಾಗೂ ಅದೇ ಗುಣಮಟ್ಟ ಹೊಂದಿರುವ ಪರೀಕ್ಷಾ ನಮೂನೆ/ ಲಕೋಟೆ/ಲೇಖನ ಸಾಮಾಗ್ರಿಗಳನ್ನು ಪೂರೈಸುವಂತೆ ಕೇಳಿಕೊಳ್ಳಲು ಕುಲಸಚಿವರು(ಪರೀಕ್ಷಾಂಗ) ಇವರಿಗೆ ನಿರ್ದೇಶನ ನೀಡಲಾಯಿತು. ಕೋವಿಡ್ –19 ಸಂದರ್ಭದಲ್ಲಿ ಪರೀಕ್ಷೆಗೆ ಸಂಬಂಧಿಸಿದ ಸಾಮಾಗ್ರಿಗಳನ್ನು ಸಂಗ್ರಹಿಸುವುದು ಹಾಗೂ ಸಂದರ್ಭೋಚಿತವಾಗಿ ಪರೀಕ್ಷೆಗಳನ್ನು ನಿರ್ವಹಿಸ ಬೇಕಾಗುವ ಹಿನ್ನೆಲೆಯಲ್ಲಿ ತುರ್ತು ಕೆಲಸವೆಂದು ಪರಿಗಣಿಸುವುದು ಎಂದು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ :ಸಾ.ಸ.2:18(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಮತ್ತು ಆರ್ಥಿಕ ಶಿಸ್ತು ಪಾಲನೆಯ ಹಿನ್ನೆಲೆಯಲ್ಲಿ ಪ್ರಸ್ತುತ ತಾತ್ಕಾಲಿಕ ಹಾಗೂ ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಸರ್ಕಾರದ ನಿಯಮಗಳನ್ನು ಪಾಲಿಸಿ ಬಳಸಿಕೊಳ್ಳುವ ಕುರಿತು.

**ನಿರ್ಣಯ:** ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲು ಕಾಲಾವಕಾಶದ ಅಗತ್ಯವಿರುವುದರಿಂದ ಮುಂದಿನ ಸಭೆಯಲ್ಲಿ ಚರ್ಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ :ಸಾ.ಸ.2:19(2020)

**ವಿಷಯ:** ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ, ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ ಮತ್ತು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮಂಗಳೂರು ಇಲ್ಲಿ ಸ್ಥಾಪನೆಯಾಗುವ ಹುದ್ದೆಯ ಸೃಜನೆಯ ಬಗ್ಗೆ ರಚಿಸಿದ ಪರಿನಿಯಮವು ಸರಕಾರದಿಂದ ಅನುಮೋದನೆಗೊಂಡಿರದ ಕಾರಣ.

**ನಿರ್ಣಯ:** ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಷರತ್ತುಗಳನ್ನು ಸಡಿಲಿಸಿ, ಪುನರ್ ಪರಿಶೀಲಿಸುವಂತೆ ಹಾಗೂ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಈಗಾಗಲೇ ಸಲ್ಲಿಸಿರುವ ಪರಿನಿಯಮವನ್ನು ಅನುಮೋದಿಸುವಂತೆ ಕೋರಿ ಸರಕಾರಕ್ಕೆ ಮನವಿ ಮಾಡಲು ಸಭೆಯು ತೀರ್ಮಾನಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.2:20 (2020)

**ವಿಷಯ:** ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ಈ ವಿದ್ಯಾಸಂಸ್ಥೆಯನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನಾಗಿ ಪರಿವರ್ತಿಸುವ ಬಗ್ಗೆ.

**ನಿರ್ಣಯ:** ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ಈ ವಿದ್ಯಾಸಂಸ್ಥೆಯನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯನ್ನು ಅನುಮೋದಿಸಿ ಸರಕಾರಕ್ಕೆ ಸಲ್ಲಿಸುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.2:21(2020)

**ವಿಷಯ:** UGC-SAP, ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ –

ಪ್ರಯೋಗಾಲಯ ಉಪಕರಣ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** UGC-SAP, ಆನ್ವಯಿಕ ಪ್ರಾಣಿಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ – ಪ್ರಯೋಗಾಲಯ ಉಪಕರಣ ಖರೀದಿ ಬಗ್ಗೆ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.2:22(2020)

**ವಿಷಯ:** ದೈಹಿಕ ಶಿಕ್ಷಣ ವಿಭಾಗಕ್ಕೆ UGC- Scheme for development of sports infrastructure Equipment in Universities during XII plan ಯೋಜನೆಯಡಿಯಲ್ಲಿ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದೈಹಿಕ ಶಿಕ್ಷಣ ವಿಭಾಗಕ್ಕೆ UGC- Scheme for development of sports infrastructure Equipment in Universities during XII plan ಯೋಜನೆಯಡಿಯಲ್ಲಿ ಪ್ರಯೋಗಾಲಯ ಉಪಕರಣಗಳ ಖರೀದಿ ಬಗ್ಗೆ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.2:23(2020)

**ವಿಷಯ:** ದೈಹಿಕ ಶಿಕ್ಷಣ ವಿಭಾಗಕ್ಕೆ UGC- Scheme for development of sports infrastructure Equipment in Universities during XII plan ಯೋಜನೆಯಡಿಯಲ್ಲಿ ಫೋಟೋ ಫಿನಿಶ್ ಸಿಸ್ಟಂ ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದೈಹಿಕ ಶಿಕ್ಷಣ ವಿಭಾಗಕ್ಕೆ UGC- Scheme for development of sports infrastructure Equipment in Universities during XII plan ಯೋಜನೆಯಡಿಯಲ್ಲಿ ಫೋಟೋ ಫಿನಿಶ್ ಸಿಸ್ಟಂ ಖರೀದಿ ಬಗ್ಗೆ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.2:24(2020)

**ವಿಷಯ:** ದೈಹಿಕ ಶಿಕ್ಷಣ ವಿಭಾಗಕ್ಕೆ UGC- Scheme for development of sports infrastructure Equipment in Universities during XII plan ಯೋಜನೆಯಡಿಯಲ್ಲಿ ಕ್ರಿಕೆಟ್ ಪಿಚ್ ರೋಲರ್ ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದೈಹಿಕ ಶಿಕ್ಷಣ ವಿಭಾಗಕ್ಕೆ UGC- Scheme for development of sports infrastructure Equipment in Universities during XII plan ಯೋಜನೆಯಡಿಯಲ್ಲಿ ಕ್ರಿಕೆಟ್ ಪಿಚ್ ರೋಲರ್ ಖರೀದಿ ಬಗ್ಗೆ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.2:25(2020)

**ವಿಷಯ:** ಡಿಎಸ್ಟಿ–ಪರ್ಸ್ಟ್ ಪ್ರಯೋಗಾಲಯದಲ್ಲಿರುವ Field Emission Scanning Electron

Microscope ಉಪಕರಣದ ವಾರ್ಷಿಕ ನಿರ್ವಹಣೆ ಬಗ್ಗೆ

**ನಿರ್ಣಯ:** ಡಿಎಸ್ಟಿ–ಪರ್ಸ್ ಪ್ರಯೋಗಾಲಯದಲ್ಲಿರುವ Field Emission Scanning Electron Microscope ಉಪಕರಣದ ವಾರ್ಷಿಕ ನಿರ್ವಹಣೆ ಬಗ್ಗೆ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.2:26(2020)

**ವಿಷಯ:** ಡಿಎಸ್ಟಿ–ಪರ್ಸ್ ಪ್ರಯೋಗಾಲಯದ ಡಿಎಸ್‌ಸಿ–ಟಿಜಿಎ ಉಪಕರಣದ ಥರ್ಮೋಕಪಲ್ ಕಿಟ್ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಡಿಎಸ್ಟಿ–ಪರ್ಸ್ ಪ್ರಯೋಗಾಲಯದ ಡಿಎಸ್‌ಸಿ–ಟಿಜಿಎ ಉಪಕರಣದ ಥರ್ಮೋಕಪಲ್ ಕಿಟ್ ಖರೀದಿ ಬಗ್ಗೆ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.2:27(2020)

**ವಿಷಯ:** ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ – ರಜತ ಗ್ರಂಥ ಮಾಲಿಕೆಯಲ್ಲಿ ಪ್ರಕಟಿಸುವ ಪುಸ್ತಕಗಳನ್ನು ಮುದ್ರಿಸುವ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸಾರಾಂಗದ ರಜತ ಗ್ರಂಥ ಮಾಲಿಕೆಯಲ್ಲಿ ಪ್ರಕಟಿಸಲಿರುವ ಐದು ಪುಸ್ತಕಗಳನ್ನು ಮುದ್ರಿಸಲು ಮಂಜೂರಾತಿ ನೀಡಲಾಯಿತು. ಜೊತೆಗೆ, ಇಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮೊದಲು ಕಾನೂನಾತ್ಮಕವಾಗಿ ಕೃತಿಸ್ವಾಮ್ಯವನ್ನು(copy Right) ನೋಂದಾಯಿಸಿಕೊಳ್ಳುವ ಹಾಗೂ ಪ್ರಕಟಗೊಳ್ಳುವ ಪುಸ್ತಕಗಳು ಅನಗತ್ಯವಾಗಿ ಗೊಂದಲ ಸೃಷ್ಟಿಸಿ ಸಾರ್ವಜನಿಕ ವಲಯದಲ್ಲಿ ವಿಶ್ವವಿದ್ಯಾನಿಲಯದ ಗೌರವಕ್ಕೆ ಚ್ಯುತಿ ಬಾರದಂತೆ ಎಚ್ಚರಿಕೆ ವಹಿಸಲು ತಜ್ಞರ ಸಮಿತಿಯ ಮೂಲಕ ಪರಿಶೀಲಿಸಿ ಶಿಫಾರಸ್ಸು ಮಾಡುವಂತೆ ಸೂಚಿಸಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ :ಸಾ.ಸ.2:28(2020)

**ವಿಷಯ:** ಕುಲಸಚಿವರ ಕಚೇರಿಯ ವಿವಿಧ ವಿಭಾಗಗಳಿಗೆ ಬೇಕಾದ A4 size, FS size ಮತ್ತು duplo colour ಪೇಪರುಗಳನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ಕುಲಸಚಿವರ ಕಚೇರಿಯ ವಿವಿಧ ವಿಭಾಗಗಳಿಗೆ ಬೇಕಾದ A4 size, FS size ಮತ್ತು duplo colour ಪೇಪರುಗಳನ್ನು ಖರೀದಿಸುವ ಬಗ್ಗೆ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ :ಸಾ.ಸ.2:29(2020)

**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ರವೀಂದ್ರ ಕಲಾಭವನದ ಸೆಮಿನಾರ್ ಕೊಠಡಿಗಳಿಗೆ ಪೀಠೋಪಕರಣ ಖರೀದಿ ಕುರಿತು.

**ನಿರ್ಣಯ:** ಖರೀದಿಗೆ ಮಂಜೂರಾತಿ ನೀಡುವಾಗ, ಒಂದೊಂದು ಪ್ರಕರಣಗಳಲ್ಲಿ ಒಂದೊಂದು ರೀತಿಯ (ವಾರ್ಷಿಕ ದರ ಒಪ್ಪಂದ/ಟೆಂಡರ್) ಮಾನದಂಡಗಳನ್ನು ಅಳವಡಿಸಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಮಂಗಳೂರು ವಿಶ್ವವಿದ್ಯಾನಿಲಯವು, ಈಗಾಗಲೇ ಮಾಡಿಕೊಂಡಿರುವ

ವಾರ್ಷಿಕ ದರ ಒಪ್ಪಂದ(Annual Rate Contract) ಕ್ಕೆ ಬದ್ಧರಾಗಿರಬೇಕಾಗಿದ್ದು, ಈ ಕಾರ್ಯಸೂಚಿಗೆ ಸಂಬಂಧಪಟ್ಟಂತೆ ಬೇರೊಂದು ಟೆಂಡರ್ ಪ್ರಕ್ರಿಯೆ ನಡೆಸುವ ಅಗತ್ಯತೆ ಬಗ್ಗೆ ಮೇಲ್ನೋಟಕ್ಕೆ ಸಭೆಗೆ ಮನವರಿಕೆಯಾಗದಿರುವುದರಿಂದ ಸವಿವರ ಮಾಹಿತಿ ಹಾಗೂ ಸೂಕ್ತ ಟಿಪ್ಪಣಿಗಳೊಂದಿಗೆ ಪ್ರಸ್ತಾವನೆಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ :ಸಾ.ಸ.2:30(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಬೌಲಿಂಗ್ ಮೆಶಿನ್‌ನ್ನು ಖರೀದಿಸುವ ಕುರಿತು.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಬೌಲಿಂಗ್ ಮೆಶಿನ್ ಖರೀದಿ ಬಗ್ಗೆ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ :ಸಾ.ಸ.2:31(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಒಳಾಂಗಣ ಕ್ರೀಂಡಾಗಣದಲ್ಲಿರುವ ಬ್ಯಾಡ್‌ಮಿಂಟನ್ ಕೋರ್ಟ್‌ಗೆ ಸಿಂಥೆಟಿಕ್ ಮ್ಯಾಟ್‌ಗಳನ್ನು ಖರೀದಿಸುವ ಕುರಿತು.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಒಳಾಂಗಣ ಕ್ರೀಂಡಾಗಣದಲ್ಲಿರುವ ಬ್ಯಾಡ್‌ಮಿಂಟನ್ ಕೋರ್ಟ್‌ಗೆ ಸಿಂಥೆಟಿಕ್ ಮ್ಯಾಟ್‌ಗಳ ಖರೀದಿ ಬಗ್ಗೆ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು

**IV ಇತರ ವಿಷಯಗಳು**

1. LLM integrated course ನ್ನು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲು ಸಮಿತಿ ರಚಿಸುವ ಬಗ್ಗೆ ತೀರ್ಮಾನಿಸಲಾಯಿತು ಹಾಗೂ Diploma/certificate programme in law, GST ಪ್ರಾರಂಭಿಸುವ ಚಿಂತನೆಯನ್ನು ಮಾಡಲಾಯಿತು.

2. ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಮೇಶ್ ಕೆ., ಇವರು ಇತ್ತೀಚೆಗೆ ಪತ್ರಿಕೆಗಳಲ್ಲಿ ಮಾಜಿ ಸಿಂಡಿಕೇಟ್ ಸದಸ್ಯರೊಬ್ಬರು ಈ ಹಿಂದೆ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಮಾಧ್ಯಮದ ಮೂಲಕ ಆಪಾದಿಸಿದ್ದು, ಈ ಬಗ್ಗೆ ನಿವೃತ್ತ ನ್ಯಾಯಧೀಶರನ್ನು ನೇಮಕ ಮಾಡಿ ತನಿಖೆ ಮಾಡಬೇಕು ಎಂದು ಅಭಿಪ್ರಾಯ ಪಟ್ಟರು.

   ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ವಿವೇಕಾನಂದ ಪನಿಯಾಳ ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸಮಗ್ರ ತನಿಖೆ ಆಗಬೇಕು. ತಪ್ಪಿತಸ್ಥ ವ್ಯಕ್ತಿಗೆ ಶಿಸ್ತುಕ್ರಮ ಆಗಬೇಕು ಹಾಗೂ ಕುಲಸಚಿವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ವಿಚಾರಣೆ ನಡೆಸಬೇಕು ಮತ್ತು ಈ ಸಂಬಂಧ ಎಲ್ಲಾ ದಾಖಲೆಗಳನ್ನು ಕುಲಸಚಿವರು ತಕ್ಷಣ ತಮ್ಮ ವಶಕ್ಕೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

3. ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಪಾರ್ವತಿ ಅಪ್ಪಯ್ಯ ಇವರು ವಿಶ್ವವಿದ್ಯಾನಿಲಯದ ಸಿಬ್ಬಂದಿಗಳ ವರ್ಗಾವಣೆಯ ಬಗ್ಗೆ ಮಾಹಿತಿ ಕೇಳಿದರು. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ವರ್ಗಾವಣೆ/ನಿಯೋಜನೆ ಬಗ್ಗೆ ಸಮಗ್ರವಾಗಿ ಚರ್ಚಿಸಿ ವರದಿ ಸಲ್ಲಿಸಲು ಸಮಿತಿ ರಚಿಸಿರುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

4. ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಪಾರ್ವತಿ ಅಪ್ಪಯ್ಯ ಇವರು ತನ್ನ ವಿರುದ್ಧ ಈ ಹಿಂದೆ ಇದ್ದ ಪ್ರಕರಣ JMFC ನ್ಯಾಯಾಲಯ ಮಡಿಕೇರಿಯಲ್ಲಿ ಮುಕ್ತಾಯವಾಗಿರುತ್ತದೆ. ಒಂದು ವೇಳೆ ಈ ಸಂಬಂಧ ಉಚ್ಚ ನ್ಯಾಯಾಲಯಕ್ಕೆ ಅಸಮರ್ಪಕ/ಅಪೂರ್ಣ/ತಪ್ಪು ಮಾಹಿತಿ ಸಲ್ಲಿಸಿದ್ದಲ್ಲಿ, ಇದಕ್ಕೆ ಕಾರಣಕರ್ತರಾದ ಸಿಬ್ಬಂದಿಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅಫಿದಾವಿತನ್ನು ಹಿಂಪಡೆದುಕೊಳ್ಳಬೇಕೆಂದು ಆಗ್ರಹಿಸಿದರು.

ಈ ಬಗ್ಗೆ ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ವಿವೇಕಾನಂದ ಪನಿಯಾಳ ಇವರು ಸಿಂಡಿಕೇಟು ಸದಸ್ಯರ ಗಮನಕ್ಕೆ ತಾರದೆ ಉಚ್ಚನ್ಯಾಯಾಲಯಕ್ಕೆ ಅಫಿದಾವಿತ್ ಸಲ್ಲಿಸಿರುವುದು ಸರಿಯಾದ ಕ್ರಮ ಅಲ್ಲ. ಆಗಿರುವ ದೋಷವನ್ನು ಸರಿಪಡಿಸಿ ತಪ್ಪಾಗಿ ಸಲ್ಲಿಸಿರುವ ಅಫಿದಾವಿತ್ ಹಿಂತೆಗೆದುಕೊಳ್ಳಬೇಕೆಂದು ಹಾಗೂ ಇನ್ನು ಮುಂದೆ ನ್ಯಾಯಾಲಯಕ್ಕೆ ಸಲ್ಲಿಕೆಯಾಗುವ ಎಲ್ಲಾ Parawise remark ನ್ನು ಸಿಂಡಿಕೇಟು ಸಭೆಯ ಗಮನಕ್ಕೆ ತಂದು ನೀಡುವಂತೆ ತಿಳಿಸಿದರು.

5. ಮಂಗಳೂರು ವಿಶ್ವವಿದ್ಯಾನಿಲಯ ಮಾಡಿಕೊಂಡಿರುವ ಎಲ್ಲಾ ವಾರ್ಷಿಕ ದರ ಒಪ್ಪಂದಗಳ (Annual Rate Contract)/ ಧಾರಣಾಗುತ್ತಿಗೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ನೀಡುವಂತೆ ಸೂಚಿಸಲಾಯಿತು. ಅದಲ್ಲದೆ, ಖರೀದಿ ಸಮಿತಿಯ ಪ್ರಸ್ತಾವನೆಗಳನ್ನು ಸಿಂಡಿಕೇಟು ಸಭೆಗೆ ಮಂಡಿಸುವಾಗ ಇ–ಟೆಂಡರ್ ಪ್ರಕ್ರಿಯೆ ಬಗ್ಗೆ ಸವಿವರವಾದ ಸಮಗ್ರ ಮಾಹಿತಿಗಳನ್ನು ಕಾರ್ಯಸೂಚಿಯ ಟಿಪ್ಪಣಿಯಲ್ಲಿ ಒದಗಿಸತಕ್ಕದ್ದು(ಎಷ್ಟು ಬಾರಿಯ ಟೆಂಡರ್ ಕರೆ, ತೆರಿಗೆ ಹೊರತುಪಡಿಸಿದ ದರ ಸಂಧಾನಕ್ಕೆ ಲಭ್ಯವಿರುವ ದರ, ಏಕೈಕ ಪೂರೈಕೆದಾರರಾಗಿದ್ದಲ್ಲಿ ಪ್ರಮಾಣಪತ್ರ ಇತ್ಯಾದಿ).

6. ಗಣಕಯಂತ್ರ, ಉಪಕರಣಗಳು ಇತ್ಯಾದಿ ಬೆಲೆಬಾಳುವ ವಸ್ತುಗಳನ್ನು ಖರೀದಿಸುವ ಸಂದರ್ಭದಲ್ಲಿ ಮೂರನೇ ಸಂಸ್ಥೆಯಿಂದ (Third party) ಗುಣಮಟ್ಟದ ಬಗ್ಗೆ ದೃಢೀಕರಿಸಿಕೊಳ್ಳುವುದು ಹಾಗೂ ವಿಮೆಯನ್ನು ಮಾಡಿಕೊಳ್ಳುವಂತಹ ವ್ಯವಸ್ಥೆ ಔಚಿತ್ಯಪೂರ್ಣವಾದದ್ದೆಂದು ಸಭೆ ಅಭಿಪ್ರಾಯ ಪಟ್ಟಿತು. ಖರೀದಿ ಉಪಕರಣಗಳಿಗೆ ವಿಮೆಯನ್ನು ಮಾಡಿಸುವ ಸಲುವಾಗಿ ಎಲ್ಲಾ ಖಾಸಗಿ ಮತ್ತು ಸರಕಾರಿ ಕಂಪನಿಗಳಿಂದ ಟೆಂಡರು ಕರೆದು ವಿಮೆ ಮಾಡಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಯಿತು.

7. ಖರೀದಿ ಪ್ರಸ್ತಾವನೆಗಳನ್ನು ಬಿಡಿಬಿಡಿಯಾಗಿ ವಿಲೇವಾರಿಗೊಳಿಸುವುದು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡುವ ಸಾಧ್ಯತೆ ಇರುವುದರಿಂದ ಎಲ್ಲಾ ವಿಭಾಗಗಳು ತಮಗೆ ಒದಗಿಸಲಾದ ಆಯವ್ಯಯದ ಅವಕಾಶದಂತೆ ಮುಂದಿನ ಇಡಿ ವರ್ಷಕ್ಕೆ ಅಗತ್ಯವಿರುವ ರಾಸಾಯನಿಕಗಳು, ಗಣಕಯಂತ್ರ, ಇಲೆಕ್ಟ್ರಾನಿಕ್ಸ್ ಉಪಕರಣಗಳು, ಇತರ ಸಾಮಾಗ್ರಿಗಳು ಇತ್ಯಾದಿ ವಸ್ತುಗಳ ಪಟ್ಟಿ ಮಾಡಿ

ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದಲ್ಲಿ, ಇ–ಟೆಂಡರ್ ಮೂಲಕ ಕೇಂದ್ರೀಕೃತ ಖರೀದಿ (Centralised purchase) ವ್ಯವಸ್ಥೆಯನ್ನು ಅನುಷ್ಠಾನಗೊಳಿಸಬಹುದು. ಇದರಿಂದ ಎಲ್ಲಾ ರೀತಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಲಾಭವಾಗಬಹುದು. ಈ ನಿಟ್ಟಿನಲ್ಲಿ Enterprise Resource Planning (ERP) ತಂತ್ರಾಂಶದ ಮೂಲಕ ಉದ್ದೇಶಿತ ಗುರಿ ಮುಟ್ಟಬಹುದೆಂಬ ಅಭಿಪ್ರಾಯವನ್ನು ಸಭೆಯಲ್ಲಿ ವ್ಯಕ್ತಪಡಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |